ನಿಯಮ - ಹಿಹಿ೪ರ ಮೇರೆಗೆ

ಆಂಧ್ರ ಸರ್ಕಾರದವರು ಶ್ರೀಶೈಲಂ ಎಡ ಹಾಗೂ ಬಲದಂಡೆ ಮಂತ್ತು ಪುಲಿಚಂತಾಲ ಆಣೆಕಟ್ಟನ್ನು ಪ್ರಾರಂಭ ಮಾಡಿರುವುದಂ

ಶ್ರೀ ಎಸ್.ಎಸ್. ಕಡಪಟ್ಟಿ.—ಆಂಧ್ರ ಸರಕಾರದವರು ಶ್ರೀಶೈಲಂ ಎಡದಂಡೆ ಹಾಗೂ ಬಲ ದಂಡೆ ಮಂತ್ತು ಪುಲಿಚಂತಾಲ ಆಣೆಕಟ್ಟಿನ ಕಾರ್ಯವನ್ನು ಭರದಿಂದ ಪ್ರಾರಂಭಿಸಿದ್ದು ಅದು ಕರ್ನಾಟಕ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ರಾಜ್ಯ ಸರ್ಕಾರ ಕೃಷ್ಣಾ ನೀರಿನ ಉಪಯೋಗಕ್ಕೆ ಯಾವ ರೀತಿ ಕಾರ್ಯಕ್ರಮ ಹಾಕಿಕೊಂಡಿದೆ ? ಹಾಗೂ ಅದನ್ನು ಸ್ಥಗಿತಗೊಳಿಸಲಿಕ್ಕೆ ಯಾವ ಕ್ರಮ ಕೈಗೊಂಡಿದ್ದೀರಿ ? ಹಾಗೂ ರಾಜ್ಯದ ಹಿತ ಕಾಪಾಡಲು ಏನು ವ್ಯವಸ್ಥೆ ಮಾಡಿರುವಿರಿ ?

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಸದಸ್ಯರು ಈ ವಿಷಯದ ಗಹನತೆಯನ್ನು ಎತ್ತಿದ್ದಾರೆ ಎನ್ನುವುದನ್ನು ನಾವೆಲ್ಲ ಒಪ್ಪಿಕೊಳ್ಳುತ್ತೇವೆ. ಇದರ ಬಗ್ಗೆ ವಾದ ವಿವಾದ ಬೇಡ. ಸ್ವಲ್ಪ ಹೆಚ್ಚು ವಿವರಣೆ ಬೇಕಾದರೂ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಇದನ್ನು ನಿಯಮ ೫೫ಳರಲ್ಲಿ ತರುವುದಕ್ಕಿಂತ ಬೇರೆ ರೂಪದಲ್ಲಿ ತಂದಿದ್ದರೆ, ಹೆಚ್ಚು ಬೆಳಕನ್ನು ಚೆಲ್ಲುವುದಕ್ಕೆ ಸಾಧ್ಯವಾಗುತ್ತಿತ್ತು ತಮ್ಮ ಮನಸ್ಸಿನ ಕಳವಳವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ವಿವರವನ್ನು ನಿಖರವಾಗಿ ಕೇಳಿದ್ದಾರೆ, ಆದರೆ ಇಂತಹಕ್ಕಿಂತಹ ನಿಯಮವನ್ನು ಸ್ವಲ್ಪ ಸಡಿಲ ಮಾಡಬೇಕು.

ಶ್ರೀ ಕೆ.ಹೆಚ್. ಪಾಟೀಲ್.—ಇದರೊಳಗೆ ನಾನು ಹೇಳುವಂಥದ್ದು ಏನೆಂದರೆ, ಆ ಕಡೆಯ ಸದಸ್ಯರೇ ಈ ಸರ್ಕಾರ ರಾಜ್ಯದ ಹಿತರಕ್ಷಣೆಯನ್ನು ಮಾಡುವುದಕ್ಕೆ ಏನು ಮಾಡುತ್ತಿದ್ದಾರೆ ಎನ್ನುವ ಪ್ರಶ್ನೆಯನ್ನು ಎತ್ತಿದ್ದಾರೆ. ಈ ಕಡೆಯವರಲ್ಲ. ಅವರೇ ಎತ್ತಿದ್ದಾರೆ. ಇದು ಅತ್ಯಂತ ಉಪಯುಕ್ತ ವಾದುದು. ಇದನ್ನು ಅಧ್ಯಕ್ಷರಾದ ನಾವು ಗಮನ ಮಾಡಬೇಕು. ಇದರ ಮೇಲೆ ಏನು ನಿರ್ಣಯ ವನ್ನು ಕೊಡಬೇಕೋ ಅದನ್ನು ನಿಮಗೇ ಬಿಟ್ಟಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಇಂತಹ ಮಹತ್ತರವಾದ ವಿಷಯದಲ್ಲಿ ಅಧ್ಯಕ್ಷರಿಗೆ ಎಡಗಡೆ ಕುಳಿತಿರುವಂತಹ ಸದಸ್ಯರಾಗಲಿ, ಬಲಗಡೆ ಕುಳಿತಿರುವಂತಹ ಸದಸ್ಯರಾಗಲಿ ಇಬ್ಬರೂ ಒಂದೇ. ಇದರ ಬಗ್ಗೆ ತಂಬಾ ಶ್ರದ್ಧೆ ವಹಿಸಿ, ಆಸಕ್ತಿ ವಹಿಸಿ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಅದಕ್ಕೆ ನನ್ನ ಅಭಿನಂದನೆ ಸದಾ ಇದ್ದೇ ಇರುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಶೈಲಂ ಬಲದಂಡೆ ನಾಲೆ ಯೋಜನೆಯನ್ನು ಕೇಂದ್ರ ಸರ್ಕಾರದವರು ೧೯೮೦ನೇ ಇಸವಿಯಲ್ಲಿ ಮಂಜೂರ್ಮಾಡಿದ್ದಾರೆ. ಈ ಕೆಲಸ ಈಗ ನಡೆಯುತ್ತಿದೆ. ಶ್ರೀಶೈಲಂ ಎಡದಂಡೆ ನಾಲೆ ಯೋಜನೆಯನ್ನು ಕೇಂದ್ರದ ಜಲ ಆಯೋಗಕ್ಕೆ ಆಂಧ್ರ ಸರ್ಕಾರ ಕಳುಹಿಸಿ ಅದನ್ನು ಮಂಜೂರು ಮಾಡಲು ಕೋರಿರುತ್ತಾರೆ. ಈ ಎಲ್ಲಾ ಯೋಜನೆಗಳಿಗೂ ಕೃಷ್ಣ ಜಲ ವಿವಾದ ನ್ಯಾಯ ಮಂಡಲಿ ಒಂದು ಹನಿ ನೀರನ್ನು ಕೊಟ್ಟಿಲ್ಲ. ಆಂಧ್ರ ಪ್ರದೇಶಕ್ಕೆ ಕೃಷ್ಣ ಜಲ ವಿವಾದ ಮಂಡಲಿಯು ಕೊಟ್ಟಿರುವ ೮೦೦ ದಶಲಕ್ಷ ಘನ ಅಡಿ ನೀರು ಅಗಲೇ ಬೇರೆ ಬೇರೆ ಯೋಜನೆಗಳಿಗೆ ಮೀಸಲಾಗಿದೆ. ಕೃಷ್ಣ ಜಲ ನ್ಯಾಯ ಮಂಡಲಿಯು ಕರ್ನಾಟಕಕ್ಕೆ ೭೩೫ ದಶಲಕ್ಷ ನೀರನ್ನು ಕೊಟ್ಟಿರುತ್ತದೆ. ಅದರ ಪೈಕಿ ಸುಮಾರು ೫೯೮ ದಶಲಕ್ಷ ಘನ ಅಡಿ ನೀರು ಹಾಲಿ ಚಾಲ್ತಿಯಲ್ಲಿರುವ ಯೋಜನೆಯಲ್ಲೂ ೨೪೮ ದಶಲಕ್ಷ ಘನ ಅಡಿ ನೀರು ನಿರ್ಮಾಣವಾಗುತ್ತಿರುವ ಯೋಜನೆಗಳಲ್ಲೂ ಉಪಯೋಗವಾಗುತ್ತಿದೆ. ಅಂದರೆ ಇನ್ನೂ ಸುಮಾರು ೫೮ ದಶಲಕ್ಷ ಘನ ಅಡಿ ನೀರನ್ನು ಉಪಯೋಗಕ್ಕೆ ಹೊಸ ಯೋಜನೆಗಳ ಮುಖಾಂತರ ತೆಗೆದುಕೊಳ್ಳಬೇಕಾಗುತ್ತದೆ. ಈಗ ನಡೆಯುತ್ತಿರುವ ಮತ್ತು ೫೮ ದಶಲಕ್ಷ ಘನ ಅಡಿ ನೀರನ್ನು ಉಪಯೋಗಿಸಿ ಕೊಳ್ಳಲು ಕೈಗೊಳ್ಳಬೇಕಾಗಿರುವ ಯೋಜನೆಗಳನ್ನು ಕ್ರಿ.ಶ. ೨೦೦೦ನೇ ಇಸವಿಯ ಮೇ ತಿಂಗಳೊಳಗೆ ಪೂರೈಸಲು ಉದ್ದೇಶಿಸಿ ಈ ವರ್ಷದಿಂದಲೇ ನೀರಾವರಿಗೆ ಹೆಚ್ಚಿನ ಹಣವನ್ನು ಕೊಡಲು ಸರ್ಕಾರ ಪ್ರಯತ್ನ ಮಾಡುತ್ತದೆ. ಸರ್ಕಾರದ ನಿರ್ಧಾರದಂತೆ ಕೃಷ್ಣ ನ್ಯಾಯ ಮಂಡಲಿ ಕೊಟ್ಟಿರುವ ಪೂರ್ತಾ ನೀರು ಬಳಕೆಯಾಗಬೇಕಾಗಿದೆ. ಇದಲ್ಲದೆ ಆಂಧ್ರ ಪ್ರದೇಶದ ಯೋಜನೆಗಳಿಗೆ ಮಂಜೂರಾತಿ ನೀಡಬಾರದೆಂದು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಒತ್ತಾಯ ಮಾಡಿದ್ದೇವೆ.

(ಶ್ರೀ ಕೆ.ಬಿ. ಶಾಣಪ್ಪನವರು ಮಾತನಾಡಲು ನಿಂತರು)

ಅಧ್ಯಕ್ಷರು.—ಇದರಲ್ಲಿ ಚರ್ಚೆಗೆ ಅವಕಾಶ ಇರುವುದಿಲ್ಲ. ತಾವು ರೂಲ್ಸ್ ರೆಗ್ಯುಲೇಷನ್ಸ್ ಬಿಟ್ಟು ಮಾತನಾಡುವುದು ಸರಿಯಲ್ಲ. ಆದ್ದರಿಂದ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಮಂತ್ರಿಗಳು ವಿವರವಾಗಿ ಹೇಳುತ್ತೇನೆಂದು ಹೇಳುತ್ತಾರೆ.

ಅಧ್ಯಕ್ಷರು.—ನಾವು ರೂಲ್ಸ್ ಪ್ರಕಾರ ಹೋಗಬೇಕಾಗುತ್ತದೆ. ಇವತ್ತು ೨೦ ನೋಟೀಸ್ ಗಳಿವೆ. ಇದೇ ಪ್ರಕಾರ ೨೦ ಜನರಿಗೆ ಅವಕಾಶ ಕೊಡುತ್ತಾ ಹೋದರೆ ೨-೩ ಗಂಟೆ ಬೇಕಾಗುತ್ತದೆ. ೩೫ಳನೇ ನಿಯಮದ ಪ್ರಕಾರ ನೀವು ಓದಿ ಹೇಳಬೇಕು, ಮಂತ್ರಿಗಳು ಉತ್ತರ ಇದ್ದರೆ ಕೊಡಬೇಕು, ಇಲ್ಲದಿದ್ದರೆ ನಾಳೆ ಕೊಡುತ್ತೇನೆಂದು ಹೇಳಬೇಕು.

ಶ್ರೀ ಕೆ.ಬಿ. ಶಾಣಪ್ಪ.—ಇವರು ಬಾಯಿಯಿಂದ ಹೇಳಿದರೆ ಕೆಲಸ ಆಗುವುದಿಲ್ಲ.

ಅಧ್ಯಕ್ಷರು.—ನೀವು ಮಾತನಾಡಿದ್ದನ್ನು ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ. (ಶ್ರೀಯುತರುಗಳಾದ ಕೆ.ಬಿ. ಶಾಣಪ್ಪ, ಕಡಪಟ್ಟಿ ಮತ್ತು ಕೃಷ್ಣನ್ ಅವರು ಮಾತನಾಡಲು ನಿಂತರು)

ಅಧ್ಯಕ್ಷರು.—ನೀವುಗಳು ಮೂವರು ಹೇಳಿದ್ದುದೂ ರೆಕಾರ್ಡ್ ಆಗುವುದಿಲ್ಲ. ನಾನು ರೂಲ್ಸ್ ಬಿಟ್ಟು ಹೋಗುವುದಕ್ಕೆ ತಯಾರಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ೩೫ನೇ ನಿಯಮವನ್ನು ಪಾಲನೆ ಮಾಡುವುದರಲ್ಲಿ ನನ್ನ ಭಿನ್ನಾಭಿಪ್ರಾಯ ಇಲ್ಲ. ಈ ವಿಷಯದ ಬಗ್ಗೆ ಚರ್ಚೆಗೆ ನಾಳೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಇದು ಗಮನ ಸೆಳೆಯುವ ಸೂಚನೆಯಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಈ ವಿಷಯದಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕೆಂದು ಹೇಳುವುದನ್ನು ನಾನು ಸ್ವಾಗತಿಸುತ್ತೇನೆ. ಆದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಆದರೆ ಇದನ್ನು ಹೇಗಾದರೂ ಮಾಡಿ ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಸದಸ್ಯರ ಇಚ್ಛೆಯಾಗಿದೆ. ಅದು ಸೂಕ್ತ.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಮೂಲಕ ಕಳುಹಿಸಿ ಕೊಡಲಿ.

ಶ್ರೀ ಹೆಚ್.ಡಿ.ದೇವೇಗೌಡ.—ಇದು ಅರ್ಧ ಗಂಟೆಕಾಲದಲ್ಲೂ ಆಗತಕ್ಕದ್ದಲ್ಲ. ದೊಡ್ಡ ಪ್ರಶ್ನೆ ಇದೆ. ರಾಜಕೀಯ ಪಕ್ಷಗಳು, ವಿರೋಧಪಕ್ಷಗಳು ಕೇಂದ್ರದಲ್ಲಿ ಅಂದರೆ ಲೋಕಸಭೆಯಲ್ಲಿ ಏನು ಕೆಲಸ ಮಾಡುತ್ತಿವೆ ಅವರೆಲ್ಲರ ಮನಸ್ಸಿನಲ್ಲಿ ಕರ್ನಾಟಕ ಇವೊತ್ತು ಆಂಧ್ರಕ್ಕೆ ಸಲ್ಲಬೇಕಾದ ನೀರನ್ನು ಆಕ್ರಮಣ ಮಾಡಿಕೊಳ್ಳುವುದಕ್ಕೆ ಹೋಗಿದೆ ಎಂಬ ಭಾವನೆ ಉಂಟಾಗಿದೆ. ಏಕೆಂದರೆ ಇವತ್ತು ಆಂಧ್ರ ಒಂದು ದೊಡ್ಡ ಲಾಬಿ ಅಲ್ಲಿ ಬಿಲ್ಡ್ ಅಪ್ ಆಗಿದೆ ಎಂದು ಸದನದ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕಕ್ಕೆ ಬರಬೇಕಾದ ನೀರನ್ನು ಆಕ್ರಮಣ ಮಾಡಿಕೊಳ್ಳತಕ್ಕ ದಿಕ್ಕಿನಲ್ಲಿ ಯಾರು ಪ್ರಯತ್ನ ಮಾಡುತ್ತಿದ್ದಾರೆಂಬುದನ್ನು ಕೇಂದ್ರ ಸರ್ಕಾರ ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ೮೦೦ ಟಿ.ಎಂ.ಸಿ. ನೀರನ್ನು ಬಚಾವತ್ ಆಯೋಗದವರು ಅವರ ವ್ಯಾಪ್ತಿ ಮೀರಿ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಲ್ಲ, ಅಲ್ಲ. ಕೇಂದ್ರ ಅರ್ಥ ಮಾಡಿಕೊಳ್ಳುವ ಮೊದಲು ತಮ್ಮ ಮಾನ್ಯ ಮುಖ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಲಿ. ಅವರು ಅರ್ಥ ಮಾಡಿಕೊಳ್ಳದೆ ಈ ಗೊಂದಲವಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡ.—ದಯವಿಟ್ಟು ನಾನು ಹೇಳುವುದನ್ನು ಕೇಳಿ. ನಾವು ಯಾರೂ ರಾಜಕೀಯ ಮಾಡುತ್ತಿಲ್ಲವೆಂದು ಮೊದಲೇ ಹೇಳಿದ್ದೇನೆ. ಮುಖ್ಯ ಮಂತ್ರಿಗಳ ಮೇಲೆ, ಸರ್ಕಾರದ ಮೇಲೆ ಫೈಟ್ ಮಾಡುವುದಕ್ಕೆ ಬೇಕಾದಷ್ಟು ಅವಕಾಶ ಇದೆ, ಆದರೆ ಈ ದಿಸೆಯಲ್ಲಿ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—೨೫೦ ಕೋಟಿ ರೂಪಾಯಿಗಳನ್ನು ಕನ್‌ವರ್ಟ್ ಮಾಡಿದರೆ ಆಗುತ್ತದೆ. ನೀವು ಹೇಳುವುದು ಒಂದು ಮಾಡುವುದು ಒಂದು ಮಾಡಿದರೆ ಅವರು ಹೇಗೆ ಕನ್‌ವಿನ್ಸ್ ಆಗುತ್ತಾರೆ ? ಹೇಗೆ ಒಪ್ಪಿಕೊಳ್ಳುತ್ತಾರೆ ?

ಶ್ರೀ ಹೆಚ್.ಡಿ. ದೇವೇಗೌಡ.—೨೫೦ ಕೋಟಿ ರೂಪಾಯಿಗಳನ್ನು ಕನ್‌ವರ್ಟ್ ಮಾಡಿ ಕೊಟ್ಟರೆ ೧೫ ವರ್ಷದಲ್ಲಿ ಯೋಜನೆ ಪೂರ್ಣವಾಗುತ್ತದೆ, ೨೫೦ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಈ ಸಭೆ ನಿರ್ಣಯ ಮಾಡಿದರೆ ಸೊಗಸಾಗಿ ಒಪ್ಪುತ್ತೇವೆ.

ಶ್ರೀ ಎಸ್.ಎಸ್. ಕಡಪಟ್ಟಿ.—ನಾಳೆಯೇ ನಿರ್ಣಯ ಕೊಡುತ್ತೇನೆ. ಅದಕ್ಕೆ ಆ ಕಡೆಯವರೂ ಸಹಕಾರ ಕೊಡುತ್ತಾರೆ. ೩೦೦ ಕೋಟಿ ರೂಪಾಯಿಗಳನ್ನು ಕೃಷ್ಣ ಯೋಜನೆಗೆ ಮತ್ತು ೧೦೦ ಕೋಟಿ ರೂಪಾಯಿಗಳನ್ನು ಕಾವೇರಿ ಬೇಸಿನ್‌ಗೆ ಕೊಡಬೇಕೆಂದು ಹೇಳುವ ನಿರ್ಣಯವನ್ನು ನಾಳೆಯೇ ಸಭೆಯ ಮುಂದಿಡುತ್ತೇನೆ. ದಯವಿಟ್ಟು ತಾವು ಒಪ್ಪಿಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಮಗೆ ಅಷ್ಟೊಂದು ಎಂಬರೇಸಮೆಂಟ್ ಇದ್ದರೆ ನಾನು ರೆಸಲ್ಯೂಷನ್ ಮೂವ್ ಮಾಡುತ್ತೇನೆ. ಸರ್ವಾನುಮತದಿಂದ ಪಾಸ್ ಮಾಡೋಣ.

ಅಧ್ಯಕ್ಷರು.—ಇದು ಖಿಖಿಳನೇ ನಿಯಮದ ಪ್ರಶ್ನೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಒಂದು ವಿಷಯವನ್ನು ಪುನರುಚ್ಚಾರ ಮಾಡಬೇಕಾಗಿದೆ. ಇವೊತ್ತು ಕರ್ನಾಟಕದಿಂದ ಹೊರಹೋಗತಕ್ಕ ನೀರು ಸಮುದ್ರಕ್ಕೆ ಹೋಗುವ ಬದಲು ಅದನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಕರ್ನಾಟಕ ಸರ್ಕಾರದವರು ಅಡ್ಡಿಪಡಿಸುತ್ತಿದ್ದಾರೆಂಬ ಪ್ರಭಲವಾದ ಲಾಬಿ ಏನಿದೆ ಅದು ಇವೊತ್ತು ರಾಷ್ಟ್ರ ಮಟ್ಟದಲ್ಲಿ ನಿರ್ಮಾಣವಾಗುತ್ತಿದೆ. ಆಂದಾಕ್ಷಣ ನಾನು ಕೇಂದ್ರ ಸರ್ಕಾರದ ಮೇಲೆ ದೋಷಾರೋಪಣೆ ಮಾಡಲಿಲ್ಲ. ಇನ್ನಾದರೂ ಈ ರಾಷ್ಟ್ರದ ಎಲ್ಲಾ ರಾಜಕೀಯ ಪಕ್ಷಗಳು ಕರ್ನಾಟಕಕ್ಕೆ ಆಗಿರತಕ್ಕ ಅನ್ಯಾಯವನ್ನು ಇದರಿಂದ ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ೧೯೮೧ರಲ್ಲಿ ಶ್ರೀಶೈಲಂ ಬಲದಂಡೆ ನಾಲೆಗೆ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಆ ಬಗ್ಗೆ ಅವರನ್ನು ಕೇಳಿಲಿಲ್ಲ. ಆದನ್ನು ಇತ್ತೀಚೆಗೆ ಪರಿಶೀಲನೆ ಮಾಡಿಸಿದ್ದೇನೆ. ಅದಾದಮೇಲೆ ಎಡದಂಡೆಗೆ ಪುನರ್ ಚಿಂತನೆ ಮಾಡಿ ಕ್ಲಿಯರೆನ್ಸ್ ಕೊಡಬೇಕೆಂದು ಹೇಳಿದ್ದೇವೆ. ೮೦೦ ಟಿ.ಎಂ.ಸಿ. ನೀರಿನಲ್ಲಿ ಒಂದು ಡ್ರಾಪ್ ಕೂಡ ಅಲೋಕೇಷನ್‌ನಲ್ಲಿ ಇಲ್ಲ. ರಾಜ್ಯ ಸರ್ಕಾರದ ಉದ್ದೇಶ ಏನು ಎಂದು ಕೇಳದೆ ಆಕ್ರಮಣ ಮಾಡಿಕೊಳ್ಳತಕ್ಕ ದಿಕ್ಕಿನಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆಂಬುದನ್ನು ತಿಳಿದುಕೊಳ್ಳಬೇಕು. ಆಂಧ್ರದ ಮಿತ್ರರಲ್ಲಿ ವಿನಂತಿಸಿಕೊಳ್ಳುತ್ತೇನೆ, ಅವರಿಗೆ ಹೇಗೆ ನೀರನ್ನು ಬಳಸಿಕೊಳ್ಳಬೇಕೆಂಬ ಇಚ್ಛೆ ಇದೆ ಅದರಂತೆ ಕರ್ನಾಟಕ ಬರಗಾಲದ ಜನರ ಬಗ್ಗೆಯೂ ಸಹಾನುಭೂತಿ ಇರಬೇಕು ಎಂದು. ನಮಗೆ ಬರಬೇಕಾದ ನ್ಯಾಯವಾದ ನೀರಿನ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ವಿಶ್ವಾಸ ಭಂಗವಾಗುತ್ತದೆಂದು ಹೇಳುತ್ತೇನೆ. ಎರಡನೆಯದಾಗಿ, ಕೇಂದ್ರ ಸರ್ಕಾರ ಈ ದಿಕ್ಕಿನಲ್ಲಿ ಯಾವುದೇ ಯಾವುದೇ ಒತ್ತಾಯಕ್ಕೆ ಮಣಿಯದೆ ರಾಜಕೀಯ ಒತ್ತಾಯಕ್ಕೆ ಮಣಿಯದೆ ನಮಗೆ ದಕ್ಕಬೇಕಾದ ನೀರು ಏನಿದೆ ಅದನ್ನು ಉಳಿಸಿಕೊಳ್ಳುವುದಕ್ಕೆ, ಬಳಸಿಕೊಳ್ಳುವುದಕ್ಕೆ ಎಲ್ಲಾ ರೀತಿಯ ಸಹಕಾರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮಂತ್ರಿಗಳು ಬಹಳ ಚೆನ್ನಾಗಿ ಹೇಳಿದ್ದಾರೆ. You have got powers. This is the State's interest.

ಅಧ್ಯಕ್ಷರು.—ಈ ಚರ್ಚೆ ರೂಲ್ ಖಿಖಿಳರ ಮೇಲೆ ನಡೆಯುತ್ತಿರುವುದು.

ಶ್ರೀ ಕೆ. ಹೆಚ್. ಪಾಟೀಲ್ —ಇದು ರೂಲ್ ಪ್ರಶ್ನೆ ಎಂದು ಇದ್ದರೆ ಸಸ್ಪೆಂಡ್ ಮಾಡಿ ಇದನ್ನು ಇವೊತ್ತೇ ತೆಗೆದುಕೊಳ್ಳಿ. ಮಾನ್ಯ ಮಂತ್ರಿಯವರು ಬಹಳ ಉತ್ತಮವಾಗಿ ಹೇಳಿದ್ದಾರೆ. ಆದ್ದರಿಂದ ಅವರು ಅಭಿನಂದನೆಗೆ ಪಾತ್ರರಾಗಿದ್ದಾರೆ. ಕರ್ನಾಟಕದ ಶೂರರಾಗಿ ಕೇಂದ್ರ ಸರ್ಕಾರದ ಮೇಲೆ ಹೊರೆ ಹಾಕಿ ಪಾಲಿಟಿಕ್ಸ್ ಮಾಡಿದ್ದೀರಿ. ಕೇಂದ್ರ ಸರ್ಕಾರದಲ್ಲಾಗಲೀ, ಎಲ್ಲಿಯೇ ಆಗಲೀ ಇವತ್ತಿನ ದಿವಸ ನಮ್ಮ ಜನರು ಕೇಂದ್ರ ಸರ್ಕಾರದಲ್ಲೂ ಕೂಡಾ ಇದ್ದಾರೆ, ಅವರು ಕರ್ನಾಟಕದ ಹಿತಕ್ಕೆ ಧಕ್ಕೆ ಬರತಕ್ಕಂಥ ರೀತಿಯಲ್ಲಿ ಒಬ್ಬರೂ ಸಹಾ ಕೆಲಸ ಮಾಡಲಿಕ್ಕೆ ತಯಾರಿಲ್ಲ, ನನಗೆ ತಿಳಿದಮಟ್ಟಿಗೆ ಪಕ್ಷದ ಮುಖಂಡರಾದ ರಾಜೀವ್ ಗಾಂಧಿಯವರು ಹೇಳಿದ್ದಾರೆ. ಕರ್ನಾಟಕ ಆಗಲೀ, ಆಂಧ್ರವಾಗಲೀ ಎಲ್ಲರ ಹಿತವನ್ನು ರಕ್ಷಣೆ ಮಾಡಬೇಕು ಎನ್ನುವ ಒಂದು ಉದ್ದೇಶ ಅವರಿಗೆ ಇದೆ. ಇದರ ಒಂದು ತೀರ್ಮಾನ ೧೯೮೦ನೇ ಇಸವಿಯಲ್ಲಿ ಆಯಿತು ಎಂದು ನೀವೇ ಹೇಳಿದ್ದೀರಿ. ನಾವೂ ಇರಲಿಲ್ಲ, ನೀವೂ ಇರಲಿಲ್ಲ, ಉತ್ತರ ಕೊಡುವುದಕ್ಕೆ ಅವರು ಬದ್ಧರಾಗಿದ್ದಾರೆ. ಇವತ್ತಿನ ದಿವಸ ಈ ಯೋಜನೆಗಳಿಗೆ ಮಂಜೂರಾತಿ ಕೊಟ್ಟಿದ್ದರೂ ಸಹಾ ಕರ್ನಾಟಕದ ಹಿತಕ್ಕೆ ಸರಿಯಾದ ಕೆಲಸವನ್ನು ಮಾಡಲಿಲ್ಲ, ಅವರು ತಮ್ಮ ಕರ್ತವ್ಯವನ್ನು ತಿಳಿದುಕೊಳ್ಳದೇ ಹೊಣೆಗೇಡಿಯಾಗಿ ಈ ರೀತಿಯಾಗಿ ವರ್ತನೆ ಮಾಡಿದ್ದಾರೆ, ಅದಕ್ಕೆ ನೀವು ಗುರಿಯಾಗಬಾರದು. ನೀವೂ ಹಾಗೆಯೇ ಕೂಡಬೇಡಿ. ನೀವು ಜವಾಬ್ದಾರಿಯನ್ನು ತೆಗೆದುಕೊಳ್ಳಿ. ಎರಡು ಸದನದ ಸದಸ್ಯರು ನಿಮ್ಮ ಹಿಂದೆ ಇದ್ದಾರೆ. ನೀವು ರಾಜ್ಯದ ರಕ್ಷಣೆ ಮಾಡಿ. ನಾವು ರಕ್ಷಣೆ ಮಾಡುವುದಕ್ಕೆ ಬರುವುದಿಲ್ಲ. ಪಾರ್ಟ್ ಹಾಕಿರತಕ್ಕಂಥವರು ನೀವು. ನೀವು ಪಾರ್ಟ್ ಮಾಡಿ. ರಾವಣನ ಪಾರ್ಟೋ, ರಾವಣನ ಪಾರ್ಟೋ ಮಾಡಿ, ಇದನ್ನು ರಕ್ಷಣೆ ಮಾಡತಕ್ಕಂಥದ್ದು ನಿಮ್ಮ ಕರ್ತವ್ಯ. ನಿಮಗೆ ವ್ಯತಿರಿಕ್ತವಾಗಿ ಮಾಡಿದರೆ ನೀವು ಬೈಯಿರಿ. ಇಲ್ಲದಿದ್ದರೆ ನೀವು ನಿಶ್ಚಿತವಾದ ಜವಾಬ್ದಾರಿಯನ್ನು ತೆಗೆದುಕೊಂಡು ಕೆಲಸ ಮಾಡಿ. ಇಲ್ಲದಿದ್ದರೆ ಹೊಣೆಗೇಡಿತನದ ಮಾತು ನಿಮಗೆ, ನಿಮ್ಮ ಸರ್ಕಾರಕ್ಕೆ, ನಿಮ್ಮ ಮುಖ್ಯಮಂತ್ರಿಗಳಿಗೆ ಬರುತ್ತದೆ ಎಂದು ಎಚ್ಚರಿಕೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಈಗ ರಾಜ್ಯದ ಹಿತವನ್ನು ಕಾಪಾಡಲಿಕ್ಕೆ ೮೦-೮೧ರಲ್ಲಿ ಮಾಡಿದಂಥ ತಪ್ಪನ್ನೇ ಮಾಡಬೇಡಿ. ಹಿಂದೆ ಮಾಡಿದಂಥ ಕೆಲವು ನ್ಯೂನತೆಗಳನ್ನು ಈಗಿನ ಸರ್ಕಾರದವರು ವಿಚಾರ ಮಾಡಬಾರದು, ಸನ್ಮಾನ್ಯ ದೇವೇಗೌಡರು ಇದನ್ನು ಪಣವಾಗಿ ತೆಗೆದುಕೊಳ್ಳಬೇಕು. ೩೦೦ ಕೋಟಿ ರೂಪಾಯಿಗಳು ಕೃಷ್ಣ ಬೇಸಿನ್‌ಗೆ, ೧೦೦ ಕೋಟಿ ರೂಪಾಯಿಗಳು ಕಾವೇರಿ ಬೇಸಿನ್‌ಗೆ ಕೊಡಬೇಕು. ಈ ಬಡ್ಜೆಟ್ ಒಳಗೆ ಇದನ್ನು ಕೂಡಿಸಿಕೊಂಡು ಕಾರ್ಯ ಪ್ರಾರಂಭ ಮಾಡಿ ತಮ್ಮ ಛಲವನ್ನು ತೋರಿಸಬೇಕು. ಪ್ರೊಟೆಸ್ಟ್ ಲೆಟರ್ ಕೊಟ್ಟು ಕೇಂದ್ರ ಸರ್ಕಾರದವರ ಮೇಲೆ ಅಪಾದನೆಯನ್ನು ಹಾಕಿ ಜವಾಬ್ದಾರಿಯನ್ನು ಅರಿಸಿಕೊಳ್ಳಲಿಕ್ಕೆ ದೇವೇಗೌಡರು ಪ್ರಯತ್ನಿಸಬಾರದು, ಈ ಸದನದ ವಿರೋಧಪಕ್ಷದವರೂ ಸಹಾ ಮುಂದೆ ಬಂದಿದ್ದಾರೆ. The Hon'ble Minister for Public Works and Irrigation should take it as a challenge and see that amount is released and work is executed. I shall move a Resolution to that effect. ಇಲ್ಲದಿದ್ದರೆ ಕರ್ನಾಟಕದ ಜನತೆ ಯಾವುದೇ ಪಕ್ಷ ಅಧಿಕಾರದಲ್ಲಿ ಇರಲಿ, ಯಾವುದೇ ಸರ್ಕಾರ ಇರಲಿ ಎಂದೂ ಯಾರನ್ನು ಈ ತಪ್ಪಿಗೆ ಕ್ಷಮಿಸುವುದಕ್ಕೆ ಶಕ್ಯ ಇರುವುದಿಲ್ಲ. ನಿಮ್ಮನ್ನು ಆಳುವಂತೆ ಜನತೆ ಮಾಡಿದ್ದಾರೆ. ಆದಕಾರಣ ಇವೊತ್ತು ಶ್ರೀಮಾನ್ ದೇವೇಗೌಡರು ರೆಸಲ್ಯೂಷನನ್ನು ಮೂವ್ ಮಾಡುವುದಕ್ಕೆ ದಯವಿಟ್ಟು ತಾವು ಪರ್ಮಿಷನ್ ಕೊಡಬೇಕು. ಇದಕ್ಕೆ ಸದಸ್ಯರೆಲ್ಲರೂ ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. He should readily agree and accept the challenge and execute the work. ರಾಜ್ಯದ ಹಿತವನ್ನು ಕಾಪಾಡಬೇಕು.

ಅಧ್ಯಕ್ಷರು.—ಅದೇನೋ ಹೇಳ್ರಿ ಗೌಡರೇ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ದೇವೇಗೌಡರಿಗೆ ಇದು ಒಂದು ಸವಾಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಈ ಸಭೆ ಒಪ್ಪಿದರೆ ನನ್ನದೇನೂ ಆಭ್ಯಂತರ ಇಲ್ಲ ಎಂದು ಹೇಳಿದ್ದೀರಿ. ನಾವೆಲ್ಲರೂ ಒಪ್ಪಿದ್ದೇವೆ. ಅವರೂ ಒಪ್ಪುತ್ತಾರೆ. ಒಂದು ರೆಸಲ್ಯೂಷನ್ ಮಾಡಿ ಸ್ವಾಮಿ. ನಾವೆಲ್ಲರೂ ಒಪ್ಪುತ್ತೇವೆ.

ಅಧ್ಯಕ್ಷರು.—ಏನು ನಿಮ್ಮದು ಮನಸ್ಸು ಮಾಡಿ ಹೇಳಿ.

ಶ್ರೀ ಎಸ್. ಎಸ್. ಕಡಪಟ್ಟಿ.—ಒಮ್ಮೆ ಆದರೂ ಧೈರ್ಯ ತೆಗೆದುಕೊಂಡು ನಿರ್ಣಯವನ್ನು ಕೊಡಿ ಸ್ವಾಮಿ.

MR. SPEAKER.—Beg borrow or steal, do something.

ಶ್ರೀ ಪಿಚ್. ಡಿ. ದೇವೇಗೌಡ.—ನಾನು ಫ್ರೀಲ್ ಮಾಡಿದರೆ ರಾಚಯ್ಯನವರು ಹಿಡಿದುಕೊಂಡು ಹೋಗುತ್ತಾರೆ. ಬೆಗ್ ಮಾಡಿದರೆ ದೇವೇಗೌಡರು ನಾಟಕೀಯವಾಗಿ ಬೆಗ್ ಮಾಡುತ್ತಾರೆಂದು ಹೇಳುತ್ತಾರೆ. ಬಾರೋಯಿಂಗ್ ಆದರೆ ಅವರ ಕಡೆ ಹೋಗಬೇಕು ಕೇಂದ್ರದಲ್ಲಿ ಪರವಾನಿಗೆಗೆ ಹೋಗಬೇಕು. ಈ ವಿಷಯದ ಬಗ್ಗೆ ಇದರ ಅರ್ಥ ಏನು ಇದೆ ಎಂದರೆ ನಮ್ಮ ನೀರನ್ನು ಎರಡು ಸಾವಿರ ಇಸವಿಯೊಳಗೆ ಉಪಯೋಗ ಮಾಡಿಕೊಳ್ಳಲಿಕ್ಕೆ ಎಲ್ಲರ ತೀವ್ರತೆ ಕಾತುರತೆ ಇದರಿಂದ ವ್ಯಕ್ತವಾಗುತ್ತದೆ ಎಂದು ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಇದು ಬೇಡ. ರೆಸಲ್ಯೂಷನ್ ತೆಗೆದುಕೊಂಡು ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮತ್ತೆ ಅವರು ಪಾಲಿಟಿಕ್ಸ್ ಮಾಡುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಸದನ ಒಪ್ಪಿದರೆ ಮಾಡುತ್ತೇವೆಂದು ಹೇಳಿದಿರಿ. ಈಗ ಸದನ ಒಪ್ಪಿದೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೦೦ ಕೋಟಿ ರೂಪಾಯಿಗಳು ಬೇಕು ಎಂದು ಪ್ರತಿ ವರ್ಷ ರೆಸಲ್ಯೂಷನ್ ಮೂವ್ ಮಾಡಿ. ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಮ್ಮ ಕಡೆಯವರು, ನಿಮ್ಮ ಕಡೆಯವರ ಕಾತುರತೆ ಈ ವಿಷಯದಲ್ಲಿ ಇದೆ. ಇದರಲ್ಲಿ ಸರ್ಕಾರದ ಕಾತುರತೆ ಎಷ್ಟು ಇದೆ ಎಂದು ನೋಡುತ್ತಿದ್ದೇವೆ. ಇದು ಒಂದು ದೊಡ್ಡ ಪ್ರಶ್ನೆ. ತಾವು ಸರಿಯಾದಂಥ ಒಂದು ಆಶ್ವಾಸನೆಯನ್ನು ಕೊಡಬೇಕು. ಮತ್ತು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಇಲ್ಲಿ ತಮ್ಮ ಜವಾಬ್ದಾರಿಯನ್ನು ತಿಳಿದುಕೊಳ್ಳಬೇಕು.

ಈ ವಿಷಯದಲ್ಲಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಹಿಂಜರಿಯಬಾರದು. ತಾವು ಹಿಂಜರಿಯುತ್ತಿದ್ದೀರಿ. ಬಾಯಿ ಮಾತಿನಲ್ಲಿ ಏಕ್ ಮಿನಿಟ್ ಕಾ ಸುಲ್ತಾನ್ ಅಥವಾ ಏಕ್ ದಿನ್ ಕಾ ಸುಲ್ತಾನ್ ಆಗಬಾರದು. ನಿಮ್ಮ ಶೌರ್ಯಕ್ಕೆ ನಮ್ಮ ಪಕ್ಷದವರು ಸವಾಲು ಕೊಟ್ಟಿದ್ದಾರೆ. ಅದನ್ನು ನೀವು ಸ್ವೀಕಾರ ಮಾಡಿ. ಮಂಡ್ಯದಲ್ಲಿ ಭಾಷಣ ಮಾಡುತ್ತೀರಿ. ಹೊರಗಡೆ ಭಾಷಣ ಮಾಡುತ್ತೀರಿ. ವಿಧಾನ ಸೌಧದಲ್ಲಿ ಭಾಷಣ ಮಾಡುವಂಥ ಧೈರ್ಯವನ್ನು ತೋರಬೇಕು. ನಿಮ್ಮ ಧೈರ್ಯದ ಸತ್ವ ಪರೀಕ್ಷೆ ಆಗಬೇಕು. ಒಂದು ರೆಸಲ್ಯೂಷನ್ ಮಾಡಿ. ನಾವು ಸಹಾ ಒಪ್ಪುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆಯ ದಿವಸ ಮಾನ್ಯ ದೇವೇಗೌಡರು ಮಾತನಾಡುವಾಗ ಕರ್ನಾಟಕದ ಜನರ ರಕ್ಷಣೆ ಮಾಡುವವರು ನಾವು ಎಂದು ಹೇಳಿದ್ದಾರೆ. ತೆಲಗು-ಗಂಗಾ ಯೋಜನೆಯನ್ನು ಈಗಾಗಲೇ ಪ್ರಾರಂಭಿಸಿದ್ದಾರೆ. ನಾವು ಈ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಕಾನೂನು ಏನೂ ನೋಡುವುದಿಲ್ಲ. ಬಿ. ಸ್ಕೀಮ್ ಬಗ್ಗೆ ಮಾತನಾಡುತ್ತಾ ಈ ರೀತಿ ಹೇಳಿದ್ದಾರೆ. ಆ ರೀತಿಯ ಧೈರ್ಯವನ್ನು ಮಾನ್ಯ ದೇವೇಗೌಡರು ತೋರಿಸಿದ್ದಾರೆ. ಈ ವಿಷಯದಲ್ಲೂ ಒಂದು ಧೈರ್ಯ ತೋರಿಸಿ.

ಶ್ರೀ ಎಸ್. ಎಸ್. ಕಡಪಟ್ಟಿ.—ತಾವು ಸರ್ಕಾರದ ಪರವಾಗಿ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಕೇಳಿಕೊಳ್ಳಿ. ನಾಳೆ ಒಂದು ರೆಸಲ್ಯೂಷನ್ ಕೊಡುತ್ತೇನೆ, ಅದನ್ನು ದಯವಿಟ್ಟು ಒಪ್ಪಿಕೊಳ್ಳಿ. ಎಲ್ಲ ಸದಸ್ಯರೂ ಒಪ್ಪಿದ್ದಾರೆ ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಮತ್ತೊಮ್ಮೆ ನಾನು ಸ್ಪಷ್ಟೀಕರಣ ಮಾಡುತ್ತೇನೆ. ಸರ್ಕಾರಕ್ಕೆ ಸಾಕಷ್ಟು ಈ ವಿಚಾರದಲ್ಲಿ ಕಾಳಜಿ ಇದೆ. ಸರ್ಕಾರಕ್ಕೆ ಕಾಳಜಿ ಇಲ್ಲ ಎನ್ನುವ ಭಾವನೆ ಯಾರಿಗೂ ಬೇಡ. ಹೌಸ್‌ನಲ್ಲಿ ಒಂದು ರೆಸಲ್ಯೂಷನ್ ಪಾಸ್ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ನಿಮ್ಮದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿ. ರೆಸಲ್ಯೂಷನನ್ನು ತೆಗೆದುಕೊಳ್ಳಿ. ಮತ್ತೆ ನಮ್ಮಿಂದ ಏನಾದರೂ ಸಹಾಯ ಬೇಕಾದರೆ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ದೇವೇಗೌಡರೇ, ಇನ್ನು ಹೇಳಿ.

ಶ್ರೀ ಹೆಚ್. ಡಿ ದೇವೇಗೌಡ.—ತಾವು ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಹೇಳಿಬಿಡಿ ಎಂದು ಹೇಳುತ್ತಿದ್ದೀರಿ. ನಾನು ಹೇಳತಕ್ಕಂಥದ್ದು ಇದರ ಬಗ್ಗೆ ಸಾಧಕ ಬಾಧಕ ಎಲ್ಲಾ ಯೋಚನೆ ಮಾಡಿ ನಿಯಮಾವಳಿಗಳ ಚೌಕಟ್ಟಿನಲ್ಲಿ ಸದನ ಏನು ತೀರ್ಮಾನ ಮಾಡುತ್ತದೆ ಆ ತೀರ್ಮಾನಕ್ಕೆ ಸರ್ಕಾರ ಬದ್ಧವಾಗಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ತಾವು ಕೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಸದ್ಯಕ್ಕೆ ಈ ಗಲಾಟೆಯ ಕಾರಣ..... ಇದು ಬಹಳ ಮುಖ್ಯವಾದ ವಿಚಾರ. ಅದನ್ನು ಓದುತ್ತೇನೆ.

(ii) ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಪದೇ ಪದೇ ನಿಲ್ಲುತ್ತಿರುವುದು

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕದಾದ್ಯಂತ ಮುಖ್ಯವಾಗಿ ಕೋಲಾರ ಜಿಲ್ಲೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜು ಪದೇ ಪದೇ ದಿನಕ್ಕೆ ೨೦ ಸಲ ಹೋಗುವುದು ಬರುವುದು ದಿನಕ್ಕೆ ಒಂದು ಸಲ ಆದು ಇಂತಹ ಕಾಲವೆಂಬುದು ನಿಗದಿ ಇಲ್ಲದೇ ಸರಬರಾಜು ನಿಲ್ಲುವುದರಿಂದ ಜನತೆ ಈ ವಿದ್ಯುಚ್ಛಕ್ತಿ ಅಲಾಖೆಯವರು ಕೊಡುತ್ತಿರುವ ಕಿರುಕುಳದಿಂದ ರೋಚ್ಚಿಗೆದ್ದಿದ್ದಾರೆ. ಲಿಂಗನಮಕ್ಕಿ ಜಲಾಶಯದಲ್ಲಿ ನೀರಿದ್ದರೂ ಈ ಪರಿಸ್ಥಿತಿ ಸರಿ ಹೋಗಿಲ್ಲ. ನೆರೆಯ ರಾಜ್ಯಗಳಲ್ಲಿ ತೊಂದರೆಯೇ ಇಲ್ಲ. ಸರಬರಾಜಿದ್ದರೂ ವೋಲ್ಟೇಜ್ ಇರುವುದಿಲ್ಲ. ವ್ಯವಸಾಯಗಾರನಿಗಂತೂ ಈ ಸತತ ಕಿರುಕುಳದಿಂದ ಅವರ ಬೆಳೆ ಕೆಟ್ಟು ತುಂಬಾ ನಷ್ಟಕ್ಕೀಡಾಗಿದ್ದಾರೆ. ಇದನ್ನು ಸರಿಪಡಿಸಿ ಇನ್ನು ಮುಂದಾದರೂ ಈ ಅವ್ಯವಸ್ಥೆ ಹೋಗುವುದೇ ಎಂಬುದರ ಬಗ್ಗೆ ಸದನದ ಗಮನಕ್ಕೆ ತರಲಿಚ್ಛಿಸಿ ಈ ಒಂದು ಸೂಚನೆಯನ್ನು ಕೊಡಲಿಚ್ಛಿಸುತ್ತೇನೆ.

ಶ್ರೀ ಪಿ. ಬೈರೇಗೌಡ.—ಇದು ಬಹಳ ಮುಖ್ಯವಾದಂಥ ವಿಚಾರ.....

ಅಧ್ಯಕ್ಷರು.—ನಿಮಗೆ ಇದು ಏನು ಸಂಬಂಧ ? ಖಿಳಿ ರ ನಿಯಮದ ಪ್ರಕಾರ ಬೇರೆ ಯಾರಿಗೂ ಸಂಬಂಧ ಇರುವುದಿಲ್ಲ.